ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಅಧ್ಯಕ್ಷರೆ, ನಾನು ಸಮಾಜ ಕಲ್ಯಾಣ, ಕಾರ್ಮಿಕ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ವಿಷಯ ಸಮಿತಿಯ 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

5) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ಕ್ರಿಕೆಟ್ ಆಟಗಾರ ಶ್ರೀ ಜಾವಗಲ್ ಶ್ರೀನಾಥ್ ಅವರಿಗೆ ಮೈಸೂರಿನ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಅವಮಾನ ಮಾಡಿರುವುದು.

ಶ್ರೀ ಎ.ರಾಮದಾಸ್ (ಕೃಷ್ಣರಾಜ) : ಮಾನ್ಯ ಅಧ್ಯಕ್ಷರೆ, ಜುಲೈ 6ನೇ ತಾರೀಖು ಶನಿವಾರ ಈ ದೇಶದ ಖ್ಯಾತಿವೆತ್ತ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್ ಅವರು ಮೈಸೂರಿಗೆ ಭೇಟಿ ನೀಡಿದಂಥ ಸಂದರ್ಭದಲ್ಲಿ ಅವರ ವಾಹನದ ಆರ್.ಸಿ.ಬುಕ್‌ನ್ನು ಕಳೆದುಕೊಂಡಿದ್ದರು. ಸಂಜೆ 7-30 ಗಂಟೆಗೆ ಮೈಸೂರು ನಗರದಲ್ಲಿರುವ ಕುವೆಂಪು ನಗರ ಪೊಲೀಸ್ ಠಾಣೆಗೆ ದೂರನ್ನು ದಾಖಲೆ ಮಾಡಲಿಕ್ಕೋಸ್ಕರವಾಗಿ ಬಂದರು. ಹಾಗೆ ಬಂದಂಥ ಸಂದರ್ಭದಲ್ಲಿ ಅಲ್ಲಿಯ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆಗಿರುವಂಥ ರಾಜೇಂದ್ರ ಪ್ರಸಾದ್ ಅವರು ಶ್ರೀನಾಥ್ ಅವರನ್ನು ಕುಳಿತುಕೊಳ್ಳಿ ಎಂದು ಜೇರ್‌ನ್ನು ಕೊಡುವಂಥ ಸೌಜನ್ಯವನ್ನು ಸಹ ತೋರಿಸಿಲ್ಲ. ನಂತರ ತಮ್ಮ ದೂರನ್ನು ಲಿಖಿತ ಮೂಲಕ ಕೊಟ್ಟು, ದೂರನ್ನು ದಾಖಲೆ ಮಾಡಿಕೊಳ್ಳಿ ಎಂದು ಮನವಿಯನ್ನು ಮಾಡುವಂಥ ಸಂದರ್ಭದಲ್ಲಿ ಆ ರಾಜೇಂದ್ರ ಪ್ರಸಾದ್‌ರವರು, ದೂರನ್ನು ದಾಖಲೆ ಮಾಡಿಕೊಳ್ಳಬೇಕಾದರೆ 'ನೀನು' ಎನ್ನುವಂಥ ಪದವನ್ನು ಉಪಯೋಗಿಸಿ ಹೋಗಿ ನೋಟರಿ ಹತ್ತಿರ ಅಫಿಡೆವಿಟ್ ಮಾಡಿಸಿಕೊಂಡು ಒಂದು ಆಮೇಲೆ ಕೇಸನ್ನು ಕೊಡಬೇಕೆನ್ನುವಂಥ ವಿಚಾರವನ್ನು ಹೇಳಿದಾಗ, ತಮ್ಮ ಪರಿಚಯವನ್ನು ಶ್ರೀನಾಥ್‌ರವರು ಹೇಳಲಿಕ್ಕೆ ಹೋದರೆ, ನೀನು ಯಾರಾದರೂ ನನಗೇನು? ಮೊದಲು ಹೋಗಿ ಅಫಿಡೆವಿಟ್‌ನ್ನು ಮಾಡಿಸಿಕೊಂಡು ಬಾ ಎನ್ನುವಂತೆ ಅವಾಚ್ಯವಾಗಿ, ಉದ್ದಟತನದಿಂದ ನಡೆದುಕೊಂಡರು. ಆ ಸಂದರ್ಭದಲ್ಲಿ ಅವರಿಗೆ ಮನಸ್ಸು ನೊಂದು ಅವರು ಠಾಣೆಯಿಂದ ಹೊರಗೆ ಹೋಗುತ್ತಿದ್ದರು. ಆಗ ಸಬ್‌ಇನ್ಸ್‌ಪೆಕ್ಟರ್ ಮಲ್ಲೇಶಯ್ಯ ತಕ್ಷಣದಲ್ಲಿಯೇ ಬಂದು ಅವರಿಗೆ ಮನವಿ ಮಾಡಿ, ಅವರೇ ಕ್ಷಮೆಯನ್ನು ಕೇಳಿ ಒಳಗೆ ಕರೆದುಕೊಂಡು ಹೋಗಿ ಆ ದಾವೆಯನ್ನು ತೆಗೆದುಕೊಂಡು ಅವರಿಗೆ ರಶೀದಿಯನ್ನು ಕೊಟ್ಟರು. ಆ ನಂತರದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಪತ್ರಿಕೆಗಳಲ್ಲಿ ಈ ವಿಚಾರ ಬಂದಿದೆ. ನೊಂದಂಥ ಶ್ರೀನಾಥ್‌ರವರು ಪೊಲೀಸ್ ಠಾಣೆಗಳಲ್ಲಿ ಮಾನವೀಯತೆಯ ದೃಷ್ಟಿಯಿಟ್ಟುಕೊಂಡು ನಡೆದುಕೊಳ್ಳದಿರುವಂಥ ವಿಚಾರವನ್ನು ನೋವಿನಿಂದ ಹೇಳಿದರು ಸದರಿ ಇನ್ಸ್‌ಪೆಕ್ಟರ್ ತನ್ನ ಟ್ರೈನಿಂಗ್ ಪೀರಿಯಡ್‌ನಲ್ಲಿ, ಪ್ರೊಬೇಷನರಿ ಪೀರಿಯಡ್‌ನಲ್ಲಿ ಇದ್ದಾಗಲೇ ಅವರು ನಡೆದುಕೊಂಡಂಥ ಅಮಾನವೀಯತೆಯ ಕೃತ್ಯದಿಂದ ಅವರನ್ನು ಸರ್ಕಾರ ಸಸ್ಪೆಂಡ್ ಮಾಡಿತ್ತು. ನಂತರ ಸಸ್ಪೆನ್‌ಷನ್‌ನ್ನು ರಿವೋಕ್ ಮಾಡಿ ಪುನಃ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಯಿತು. ಅನಂತರದಲ್ಲಿ ಕುವೆಂಪುನಗರದ ಪೊಲೀಸ್ ಸ್ಟೇಷನ್‌ನಲ್ಲಿಯೇ ಶಾಲೆಗೆ ಹೋಗುತ್ತಿದ್ದಂಥ 9ನೇ ತರಗತಿಯ ವಿನೂತ ಎನ್ನುವಂಥ ಹೆಸರಿನ ವಿದ್ಯಾರ್ಥಿನಿಯನ್ನು ಹೊಡೆದು ಅಮಾನುಷವಾಗಿ ವರ್ತಿಸಿದ್ದರಿಂದ ಅವಳು ಅಂಗವಿಕಲೆಯಾದಳು. ಆ ಸಂದರ್ಭದಲ್ಲಿ ಮೈಸೂರು ನಗರದಲ್ಲಿರುವಂಥ ಎಲ್ಲಾ ಸಂಘಸಂಸ್ಥೆಗಳು

ಪ್ರತಿಭಟನೆ ಮಾಡಿದವು. ಆಗ ಮಾನ್ಯ ಗೃಹಮಂತ್ರಿಯವರು ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಿ ಕ್ರಮವನ್ನು ತೆಗೆದುಕೊಂಡರು. ಪುನಃ ಅವರನ್ನು ರಿವೋಕ್ ಮಾಡಿ, ಅದೇ ಪೊಲೀಸ್ ಸ್ಟೇಷನ್‌ಗೆ ಪುನಃ ನೇಮಕ ಮಾಡಲಾಯಿತು. ಅಲ್ಲಿಯೇ ಕಾರ್ಯನಿರ್ವಹಣೆಯನ್ನು ಮಾಡುತ್ತಿದ್ದರು. ಹೀಗೆ ಪ್ರತಿಯೊಬ್ಬರಿಗೂ ಗೊತ್ತಿರುವಂಥ ದೇಶದ ಆಟಗಾರನ ಪರಿಸ್ಥಿತಿಯೇ ಈ ರೀತಿಯಲ್ಲಿ ಆದರೆ ಇನ್ನು ಜನಸಾಮಾನ್ಯರು ಆ ಪೊಲೀಸ್ ಠಾಣೆಗೆ ಹೋದಾಗ ಇನ್ನು ಯಾವ ರೀತಿಯಾಗಿ ನಡೆಸಿಕೊಳ್ಳಬಹುದು ಎಂಬುದು ಜನಸಾಮಾನ್ಯರ ಮನಸ್ಸಿನಲ್ಲಿ ಆಗಿರುವಂಥ ಆಘಾತ. ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ, ಈಗಾಗಲೇ ಎರಡು ಸಲ ಸಸ್ಪೆಂಡ್ ಆಗಿರುವಂಥ ಅಧಿಕಾರಿಯ ಮೇಲೆ ಸರ್ಕಾರ ಶಿಸ್ತಿನ ಕ್ರಮ ಏನು ಎಂದು ತಮ್ಮ ಮೂಲಕ ಮಾನ್ಯ ಗೃಹ ಮಂತ್ರಿಯವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

+ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಪ್ರಶ್ನೆಯನ್ನು ನಿನ್ನೆಯ ದಿವಸ ಪತ್ರಕರ್ತರು ಕೇಳಿದಾಗ ನಾನು ಹೇಳಿದ್ದೆ. ಪೊಲೀಸ್ ಕಮಿಷನರ್‌ರವರಿಂದ ಒಂದು ವರದಿಯನ್ನು ತರಿಸಿಕೊಂಡು ಸಂಬಂಧಪಟ್ಟಂಥ ಸಬ್‌ಇನ್ಸ್‌ಪೆಕ್ಟರ್ ಮೇಲೆ ಕ್ರಮವನ್ನು ಜರುಗಿಸುತ್ತೇನೆ ಎನ್ನುವಂಥ ಮಾತನ್ನು ಹೇಳಿದ್ದೆ. ಈಗತಾನೇ ನನಗೆ ಫ್ಯಾಕ್ಸ್ ಮುಖಾಂತರ ಒಂದು ವರದಿ ಬಂದಿದೆ. ಬಹುಶಃ ಸೌಜನ್ಯಕ್ಕಾಗಿ ಪುನಃ ಶ್ರೀನಾಥ್ ಅವರು ಒಂದು ಸ್ಟೇಟ್‌ಮೆಂಟ್ ಕೂಡ ಕೊಟ್ಟಿದ್ದಾರೆ. ಅದನ್ನು ಡೆಕ್ಕನ್ ಹೆರಾಲ್ಡ್‌ನಲ್ಲಿ ಓದಿದ್ದೇನೆ. ಆದರೆ ನಿಜವಾಗಲೂ ಇದು ಒಂದು ದುಃಖಕರ ಸಂಗತಿ ಮತ್ತು ಇಂಥ ಘಟನೆಗಳು ನಡೆಯಬಾರದು. ಕೇವಲ ಅವರು ಒಬ್ಬರು ಕ್ರಿಕೆಟ್ ಪಟು ಅಷ್ಟೇ ಅಲ್ಲ, ಅವರು ನಮ್ಮ ರಾಜ್ಯಕ್ಕೆ, ರಾಷ್ಟ್ರಕ್ಕೆ ಹೆಮ್ಮೆಯ ಪುತ್ರ ಮತ್ತು ವಿಶೇಷವಾಗಿ ಕ್ರಿಕೆಟ್ ಜಗತ್ತಿನಲ್ಲಿ ಅವರದೇ ಆದಂಥ ಒಂದು ಛಾಪನ್ನು ನಮ್ಮ ಹೊಸ ಪೀಳಿಗೆ ಮೇಲೆ ಒತ್ತಿದ್ದಾರೆ. ಆದರೂ ಕೂಡ ಅವರಿಗೆ ತೊಂದರೆ ಆದರೆ ಮಾತ್ರ ಕ್ರಮ ತೆಗೆದುಕೊಳ್ಳಬೇಕೆನ್ನುವುದಲ್ಲ, ಸಾಮಾನ್ಯ ನಾಗರೀಕರು ಪೊಲೀಸ್ ಸ್ಟೇಷನ್‌ಗೆ ಹೋದಾಗ ಈ ರೀತಿಯಾದ ವರ್ತನೆ ಅಥವಾ ಈ ರೀತಿಯಾಗಿ ನಡವಳಿಕೆಗಳನ್ನು ಸಬ್‌ಇನ್ಸ್‌ಪೆಕ್ಟರ್‌ಗಳು ಅಥವಾ ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಮಾಡಿದರೆ ಅವರ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ಜರುಗಿಸುತ್ತೇವೆ ಎನ್ನುವಂತ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಮತ್ತು ಇದಕ್ಕೂ ಕೂಡ ಹೊರತಾಗಿಲ್ಲ. ಈ ಹಿಂದೆ ಕೂಡ ದೂರು ಬಂದಾಗ ನಾನು ಅವರನ್ನು ಸಸ್ಪೆಂಡ್ ಮಾಡಿದ್ದೆ. ತಮಗೆ ಗೊತ್ತಿದ್ದ ಹಾಗೆ 6 ತಿಂಗಳು ಒಂದು ವರ್ಷ ಆದಮೇಲೆ 6 ತಿಂಗಳಿಗಿಂತ ಹೆಚ್ಚಿಗೆ ಸಸ್ಪೆನ್‌ಷನ್‌ಲ್ಲಿ ಇಡುವುದಕ್ಕಾಗುವುದಿಲ್ಲ, ಯಾವುದಾದರೂ ಒಂದು ಪೋಸ್ಟ್ ಕೊಡಬೇಕೆಂದಾದಾಗ ಯಾವುದೋ ಒಂದು ಒತ್ತಡ ಎಂದು ಹೇಳುವುದಕ್ಕಾಗುವುದಿಲ್ಲ, ಕೆಲವು ಸಾರಿ ಅವರದ್ದು ಇವರದ್ದು ಎಲ್ಲಾ ಒತ್ತಡಗಳು ಬರುತ್ತಿರುತ್ತವೆ. ಆದರೂ ಕೂಡ ಅನೇಕ ಸಾರಿ ನಾನು ಒತ್ತಡಕ್ಕೂ ಸಹ ಮಣಿಯುವುದಿಲ್ಲ. ಏನೇ ಆಗಲಿ ಲೈಟ್ ಪೊಲೀಸ್ ಸ್ಟೇಷನ್ ಇನ್‌ಚಾರ್ಜ್ ಕೊಡಬೇಕೆಂದು ಹೇಳಿ ಕಮಿಷನರ್ ಅವರು ಕೊಟ್ಟಿದ್ದಾರೆ. ಆದರೆ ಅಲ್ಲೂ ಕೂಡ ಇದೇ ರೀತಿಯಾಗಿ ವರ್ತನೆಯನ್ನು ಮಾಡಿ, ಕೆಲವು ಅವರ ಘಟನೆಗಳನ್ನು ಕೂಡ ಅವರು ನಮ್ಮ ನೋಟೀಸ್‌ಗೆ ತಂದಿದ್ದಾರೆ. ಆ ಮಾತನ್ನು ಕೂಡ ನಾನು ಗಮನದಲ್ಲಿಟ್ಟುಕೊಂಡು ಈ ಘಟನೆಯು ನಿನ್ನೆ ಪತ್ರಿಕೆಯಲ್ಲಿ ಬಂದ ಮೇಲೆ ಪೊಲೀಸ್ ಕಮಿಷನರ್ ಚಂದ್ರಶೇಖರ್‌ರವರಿಗೆ ಕೂಡ ನಾನು ನೇರವಾಗಿ ಪತ್ರ ಬರೆದು

ನಂತರ ಮಾತನಾಡಿದೆ. 'ಈ ಅಧಿಕಾರಿಗೆ ಅಷ್ಟೊಂದು ಒಳ್ಳೆಯ ರೀತಿಯಿಂದ ನಡೆದುಕೊಳ್ಳುವಂಥ ಸ್ವಭಾವ ಇಲ್ಲ ಮತ್ತು ಅವನಿಗೆ ಪಬ್ಲಿಕ್ ರಿಲೇಷನ್ಸ್ ಏನು ಇರಬೇಕೋ, ಆ ರಿಲೇಶನ್ಸ್ ಸರಿಯಾಗಿ ಯಾರ ಜೊತೆಯಲ್ಲಿಯೂ ಇಟ್ಟುಕೊಳ್ಳುವುದಿಲ್ಲ. ಎಂದು ಆ ಕಮೀಷನರ್‌ರವರು ಕೂಡ ಹೇಳಿದರು. ಇಲ್ಲಿಯವರೆಗೆ ಅವನ ಜೊತೆಯಲ್ಲಿರತಕ್ಕಂಥವರೆಲ್ಲರಿಗೆ ಪ್ರೊಬೇಷನರಿ ಡಿಕ್ಲೇರ್ ಆಗಿ ಎಲ್ಲರೂ ಇನ್ಸ್‌ಪೆಕ್ಟರ್ ಆಗಿ ಹೋಗಿದ್ದಾರೆ. ಅವನು ಅಲ್ಲಿಯೇ ಕಳೆದ ಇಪ್ಪತ್ತು ವರ್ಷದಿಂದ ಅಂದರೆ 1983ರಿಂದ ಸಬ್ ಇನ್ಸ್‌ಪೆಕ್ಟರ್ ಆಗಿಯೇ ಇದ್ದಾನೆ. ಅವನು ಮೊದಲನೆಯದಾಗಿ ಸಸ್ಪೆಂಡ್ ಆಗಿದ್ದು 1983-84 ರಲ್ಲಿ. ಪುನಃ ಅವನು ರೀ- ಇನ್‌ಸ್ಟೇಟ್ ಆದ, ಪುನಃ ಸಸ್ಪೆಂಡ್ ಆದ. ಹೀಗೆ ಅನೇಕ ಸಾರಿ ಆಗಿದೆ. ಅದಕ್ಕೆ ಸಂಪೂರ್ಣವಾಗಿ ಅವನ ನಡವಳಿಕೆ ಬಗ್ಗೆ ಎನ್‌ಕ್ವಯರಿ ಮಾಡಿಸಿ ಸಿವಿಲ್ ಸರ್ವೆಂಟ್‌ಗಳಿಗೆ ಇರುವ ಕಾನೂನುಗಳೇನಿವೆ, ಅವುಗಳಡಿಯಲ್ಲಿ, ಅವನ ಮೇಲೆ ಏನೇನು ಶಿಸ್ತಿನ ಕ್ರಮವನ್ನು ಜರುಗಿಸಬೇಕೋ, ಅದನ್ನು ಜರುಗಿಸುತ್ತೇನೆ. ಈ ರೀತಿಯಾಗಿ ಯಾವುದೇ ಘಟನೆಗಳು ಯಾವುದೇ ಪೊಲೀಸ್ ಸ್ಟೇಷನ್‌ನಲ್ಲಿ ನಡೆಯಬಾರದೆಂಬ ಒಂದು ಸುತ್ತೋಲೆಯನ್ನು ಕಳುಹಿಸುತ್ತೇನೆ. ಕೇವಲ ಇವತ್ತು ಶ್ರೀನಾಥ್‌ರವರಿಗೆ ಈ ರೀತಿಯಾಗಿದೆ ಎಂಬ ಪ್ರಶ್ನೆಯಲ್ಲ. ಸಾಮಾನ್ಯ ನಾಗರಿಕರು, ಹೆಣ್ಣುಮಕ್ಕಳು, ಅಮಾಯಕರು ಠಾಣೆಗೆ ಹೋಗುತ್ತಾರೆ, ಬಡವರು, ಕಾರ್ಮಿಕರು, ಅನೇಕರು ಬಾಯಿ ಇಲ್ಲದವರು ಭಾಷೆ ಇಲ್ಲದವರು ಠಾಣೆಗೆ ಹೋದಾಗ ಅವರ ಜೊತೆಯಲ್ಲಿ ಹೇಗೆ ವರ್ತಿಸಬೇಕೆನ್ನುವುದನ್ನು ಪೊಲೀಸ್ ಅಧಿಕಾರಿಗಳು ತಿಳಿದುಕೊಳ್ಳಬೇಕು. ಅದಕ್ಕೆ ಈ ಸದನದ ಮೂಲಕ ಅವರಿಗೂ ಎಚ್ಚರಿಕೆ ಕೊಡುತ್ತೇನೆ. ಯಾವುದೇ ಪೊಲೀಸ್ ಸ್ಟೇಷನ್ ಇರಲಿ, ಜನಸಾಮಾನ್ಯರ ಜೊತೆಯಲ್ಲಿ ಸರಿಯಾಗಿ ನಡೆದುಕೊಳ್ಳಬೇಕು, ಅವರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎನ್ನುವುದನ್ನು ಪನಃ ಒತ್ತಿ ಹೇಳಿ, ನಾನು ಆ ಸುತ್ತೋಲೆಯನ್ನು ಕಳುಹಿಸುತ್ತೇನೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆ ಅಧಿಕಾರಿಗಳ ಬಗ್ಗೆ ಶಿಸ್ತಿನ ಕ್ರಮವನ್ನು ಜರುಗಿಸುತ್ತೇನೆಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಎ. ರಾಮದಾಸ್: ಅವರು ಅದೇ ಪೊಲೀಸ್ ಠಾಣೆಯಲ್ಲಿದ್ದ ಸಂದರ್ಭದಲ್ಲಿ 9ನೇ ತರಗತಿಯ ಹೆಣ್ಣುಮಗಳೊಬ್ಬಳನ್ನು ಕರೆದುಕೊಂಡು ಹೋಗಿ ಠಾಣೆಯಲ್ಲಿ ಅಮಾನುಷವಾಗಿ ಅವಳ ಮೇಲೆ ಧಾಳಿ ಮಾಡಿ, ಅಂಗವಿಕಲಳನ್ನಾಗಿ ಮಾಡಿದ ಒಬ್ಬ ವ್ಯಕ್ತಿಯನ್ನು ಪುನಃ ಅದೇ ಪೊಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಆಗಿಟ್ಟಿದ್ದಾರೆಂದರೆ, ಆ ಏರಿಯಾಗಳಲ್ಲಿರುವ ಜನರ ಪರಿಸ್ಥಿತಿ ಏನಾಗಬೇಕು? ಕೊನೆಪಕ್ಷ ಅವರನ್ನು ಬದಲಾವಣೆ ಆದರೂ ಮಾಡಬೇಕಲ್ಲವೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬದಲಾವಣೆ ಮಾಡುವ ಪ್ರಶ್ನೆಯಲ್ಲ, ಶಿಸ್ತಿನ ಕ್ರಮ ಜರುಗಿಸಿ, ಆದಷ್ಟು ಕಾನೂನಿನ ಇತಿಮಿತಿಯಲ್ಲಿ ಅವನನ್ನು ಮನೆಗೆ ಕಳುಹಿಸುವ ಪ್ರಯತ್ನ ಮಾಡುತ್ತೇನೆ.

6) ಪ್ರಕಟಣೆ

ವಿಷಯ: ವಿಧಾನ ಸಭೆಯ ಕಾರ್ಯಕಲಾಪಗಳ ಸಮಿತಿಯ ವರದಿ ಮಂಡನೆ

ಅಧ್ಯಕ್ಷರು: ದಿನಾಂಕ: 8.7.2002 ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಮಿತಿಯ ಸಭೆಯಲ್ಲಿ ವಿಧಾನ ಸಭೆಯ ಕಾರ್ಯಕಲಾಪವು ಈಗಾಗಲೇ ತಿಳಿಸಿದ ಕಾರ್ಯಕ್ರಮದ ಪಟ್ಟಿಯಂತೆ ದಿನಾಂಕ: 9.7.2002 ರಿಂದ 31.7.2002 ರವರೆಗೆ ವಿಧಾನ ಸಭೆಯ